# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 862(821) |
| ಸದಸ್ಯರ ಹೆಸರು | : | ಶ್ರೀ ಶಶೀಲ್ ಜಿ ನಮೋಶಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 15.12.2025 |
| ಉತ್ತರಿಸುವವರು | : | ಮಾನ್ಯ ಉನ್ನತ ಶಿಕ್ಷಣ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಸರಕಾರಿ ಹಾಗೂ ಅನುದಾನಿತ ಪದವಿ ಮಹಾವಿದ್ಯಾಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರಾಧ್ಯಾಪಕ/ಸಹ ಪ್ರಾಧ್ಯಾಪಕರ ಪದೋನ್ನತಿ/ಸ್ಥಾನೀಕರಣ ಪ್ರಕ್ರಿಯೆಯನ್ನು ಇಲಾಖೆಯ ಆಯುಕ್ತರ ಹಂತದಲ್ಲಿಯೇ ಇದ್ದದ್ದನ್ನು ಸಂದರ್ಶನ ಹಾಗೂ ದಾಖಲಾತಿಗಳ ನಂತರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸೂಚಿಸುತ್ತಿರಲು ಕಾರಣವೇನು; | ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿನ ಸಹ ಪ್ರಾಧ್ಯಾಪಕ ಮತ್ತು ಪ್ರಾಧ್ಯಾಪಕ ಹುದ್ದೆಗಳು ಗ್ರೂಪ್-ಎ ವೃಂದದ ಹುದ್ದೆಗಳಾಗಿದ್ದು, ಸಕ್ಷಮ ಪ್ರಾಧಿಕಾರ ಸರ್ಕಾರವಾಗಿರುವುದರಿಂದ ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ/220/ಡಿಸಿಇ/2019(ಇ), ದಿನಾಂಕ: 14.05.2025ರಲ್ಲಿ ಬೋಧಕರುಗಳಿಗೆ ಸಹಾಯಕ ಪ್ರಾಧ್ಯಾಪಕರ ಹಂತದಿಂದ ಸಹ ಪ್ರಾಧ್ಯಾಪಕರ ಹಂತಕ್ಕೆ ಹಾಗೂ ಸಹ ಪ್ರಾಧ್ಯಾಪಕರ ಹಂತದಿಂದ ಪ್ರಾಧ್ಯಾಪಕರ ಹಂತಕ್ಕೆ ಒಂದು ಹುದ್ದೆಯಿಂದ ಮತ್ತೊಂದು ಹುದ್ದೆಗೆ ಪದೋನ್ನತಿ ಮಂಜೂರು ಮಾಡುವ ಕುರಿತಾದ ಪ್ರಸ್ತಾವನೆಗಳನ್ನು ಸ್ಥಾನೀಕರಣ/ಪದೋನ್ನತಿ ಸಮಿತಿಗಳ ಶಿಫಾರಸ್ಸಿನೊಂದಿಗೆ ಸರ್ಕಾರದ ಅನುಮೋದನೆಗೆ ಸಲ್ಲಿಸಲು ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಇವರಿಗೆ ತಿಳಿಸಲಾಗಿದೆ. |
| (ಆ) | ಇದರಿಂದಾಗಿ ಪ್ರಾಧ್ಯಾಪಕ/ಸಹ ಪ್ರಾಧ್ಯಾಪಕರಿಗೆ ಬಡ್ತಿ ನೀಡುವಲ್ಲಿ ಬಹಳಷ್ಟು ವಿಳಂಬವಾಗುತ್ತಿದ್ದು ಕೆಲವರು ಬಡ್ತಿ ಸಿಗದೇ ನಿವೃತ್ತಿಹೊಂದುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ನಿವೃತ್ತಿಯ ಅಂಚಿನಲ್ಲಿರುವ ಬೋಧಕರಿಂದ ಸ್ವೀಕೃತವಾಗುವ ಅರ್ಹ ಪ್ರಸ್ತಾವನೆಗಳನ್ನು ಪರಿಶೀಲಿಸಿ ಯುಜಿಸಿಯ ಎಲ್ಲಾ ಮಾನದಂಡಗಳನ್ನು ಪೂರೈಸಿದ್ದಲ್ಲಿ ಅಂತಹ ಬೋಧಕರಿಗೆ ಪ್ರಾಧ್ಯಾಪಕರು/ಸಹ ಪ್ರಾಧ್ಯಾಪಕರ ಹಂತದ ಸ್ಥಾನೀಕರಣವನ್ನು ನಿವೃತ್ತಿ ಹೊಂದುವ ಪೂರ್ವದಲ್ಲಿಯೇ ಪ್ರಾಧ್ಯಾಪಕ/ಸಹ ಪ್ರಾಧ್ಯಾಪಕರ ಹಂತದ ಸ್ಥಾನೀಕರಣವನ್ನು ವಿಳಂಬವಿಲ್ಲದಂತೆ ಮಂಜೂರು ಮಾಡಲಾಗುತ್ತಿದೆ. |
| (ಇ) | ಈ ವಿಳಂಬ ಪ್ರಕ್ರಿಯೆಯಿಂದಾಗಿ ಪ್ರಾಧ್ಯಾಪಕರಿಗೆ ಹಣಕಾಸಿನ ಪ್ರಯೋಜನವನ್ನು ಆದೇಶದ ದಿನಾಂಕದಿಂದ ನೀಡುತ್ತಿರುವುದರಿಂದ ಆರ್ಥಿಕವಾಗಿಯು ನಷ್ಟ ಅನುಭವಿಸುವಂತಾಗಿದೆ ಜೊತೆಗೆ ಕೆಲವರು ನಿವೃತ್ತಿಯ ಹಿಂದಿನ ದಿನ ಬಡ್ತಿ ಪಡೆದುಕೊಂಡಿದ್ದಾರೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ; | |
| (ಈ) | ಆದ್ದರಿಂದ ಈ ಮೊದಲಿನಂತೆ ಆಯುಕ್ತರ ಹಂತದಲ್ಲಿಯೇ ಬಡ್ತಿ ಪ್ರಕ್ರಿಯೆಯನ್ನು ಕೈಗೊಳ್ಳುವಂತೆ ನಿರ್ದೇಶನ ನೀಡುವ ಬಗ್ಗೆ ಸರ್ಕಾರದ ನಿಲುವೇನು? | |

**ಸಂಖ್ಯೆ:ಇಡಿ 439 ಡಿಸಿಇ 2025(ಇ)**

(ಡಾ. ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು